# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ –145ರ ವಾರ್ಡ್ ಸಭೆಯ ನಡವಳಿ

ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಹೊಂಬೇಗೌಡನಗರ ವಾರ್ಡ್ 177(145) ರಲ್ಲಿ ವಾರ್ಡ್ ಸಭೆಯನ್ನು ಮಾನ್ಯ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಯವರಾದ ಶ್ರೀ. ಮಹಾಂತೇಶ್ ಬುರನಾಮರ ಕಾರ್ಯಪಾಲಕ ಅಭಿಯಂತರರು (ಯೋಜನೆ–ದಕ್ಷಿಣ) ಮತ್ತು ನೋಡಲ್ ಅಧಿಕಾರಿ ಅಪ್ಪಣೆ ಮೇರೆಗೆ ದಿನಾಂಕ:17/12/2022ರ ಶನಿವಾರದಂದು ಬೆಳಗ್ಗೆ 10.00 ಗಂಟೆಗೆ ವಾರ್ಡ್ ಕಮಿಟಿ ಸಭೆಯನ್ನು ಕರೆಯಲಾಗಿದ್ದು, ವಾರ್ಡ್ ವ್ಯಾಪ್ತಿಯಲ್ಲಿನ ಕುಂದು ಕೊರತೆಗಳ ಬಗ್ಗೆ ಚರ್ಚಿಸಲು ಸದಸ್ಯರಿಗೆ ಆಹ್ವಾನ ನೀಡಿದ್ದು, ಸಭೆಗೆ ಹಾಜರಾಗಿರುವ ಎಲ್ಲರಿಗೂ ಸ್ವಾಗತ ಕೋರುತ್ತಾ, ವಾರ್ಡ್ ಸಮಿತಿ ಸಭೆಯ ಅಧ್ಯಕ್ಷರ ಅಧ್ಯಕ್ಷತೆಯೊಂದಿಗೆ ಸಭೆಯನ್ನು ನಡೆಸಲಾಯಿತು.

**ಹಾಜರಿದ್ದವರು:–**

1. ಶ್ರೀ. ಮಹಾಂತೇಶ್ ಬುರನಾಮರ ಕಾರ್ಯಪಾಲಕ ಅಭಿಯಂತರರು (ಯೋಜನೆ–ದಕ್ಷಿಣ) ಮತ್ತು ನೋಡಲ್ ಅಧಿಕಾರಿ.
2. ಶ್ರೀ. ವಿಜಯಕುಮಾರ್ ಕೆ.ಎಸ್. ಸಹಾಯಕ ಅಭಿಯಂತರರು ವಾರ್ಡ್–177.
3. ಶ್ರೀ. ಕುಮಾರ್, ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ 177.
4. ಶ್ರೀ. ಆರ್. ಉಮಾಶಂಕರ್, ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್–177.
5. ಕುಮಾರಿ. ರುಚಿತಾ, ಸಹಾಯಕ ಅಭಿಯಂತರರು (ಹೊರಗುತ್ತಿಗೆ) ವಾರ್ಡ್ 177(145).
6. ಶ್ರೀಮತಿ. ಶೋಭ ಜಿ. ಸಬ್ ಇನ್ಸ್‌ಪೆಕ್ಟರ್, ವಿಲ್ಸನ್‌ಗಾರ್ಡನ್ ಸಂಚಾರ ಪೋಲೀಸ್ ಠಾಣೆ.
7. ವಾರ್ಡಿನ ಸ್ಥಳೀಯರಾದ ಸುಚಿಮಿತ್ರ, ಶ್ರೀಮತಿ. ರೇಖಾ ಶಂಕರ್, ಶ್ರೀಮತಿ ಶುಕವಾಣಿ ಶಂಕರ್, ಶ್ರೀ. ಪಿ. ದಯಾನಂದ, ಶ್ರೀ. ಪ್ರಶಾಂತ್, ಶ್ರೀ. ಅರುಣ್‌ಕುಮಾರ್ & ಶ್ರೀ. ಹೆಚ್. ಪ್ರಭಾಕರ್.

**ಸಭೆಗೆ ಗೈರು ಹಾಜರಾದ ಇಲಾಖೆಗಳು:–**

1. ಪೋಲೀಸ್ ಇಲಾಖೆ ಅಧಿಕಾರಿಗಳು ಕಾನೂನು ಸುವ್ಯವಸ್ಥೆ ಆಡುಗೋಡಿ.
2. ವಿಲ್ಸನ್‌ಗಾರ್ಡನ್ ಪೋಲೀಸ್ ಠಾಣೆ ಕಾನೂನು ಸುವ್ಯವಸ್ಥೆ ವಾರ್ಡ್ 177.
3. ಸಹಾಯಕ ಇಂಜಿನಿಯರ್ (ಬೆಸ್ಕಾಂ).
4. ಅರಣ್ಯ ಇಲಾಖೆಯ ಅಧಿಕಾರಿಗಳು.
5. ತೋಟಗಾರಿಕೆ ಇಲಾಖೆ, ಮೇಲ್ವಿಚಾರಕರು ವಾರ್ಡ್ 177.
6. ಸಹಾಯಕ ಇಂಜಿನಿಯರ್ (BWSSB).
7. ಸ.ಕಾ.ನಿ. ಅಭಿಯಂತರರು, ರಸ್ತೆ ಮತ್ತು ಮೂಲಭೂತ ಸೌಕರ್ಯ, ಬಿಬಿಎಂಪಿ ಕೇಂದ್ರ ಕಛೇರಿ.
8. ಸ.ಕಾ.ನಿ. ಅಭಿಯಂತರರು, ಯೋಜನೆ–ಕೇಂದ್ರ, ಬಿಬಿಎಂಪಿ ಕೇಂದ್ರ ಕಛೇರಿ.



Scanned with CamScanner

Scanned with CamScanner

9. ಸ.ಕಾ.ನಿ. ಅಭಿಯಂತರರು, ಬೃಹತ್ ನೀರುಗಾಲುವೆ ಬಿಬಿಎಂಪಿ ಜಯನಗರ ವಾಣಿಜ್ಯ ಸಂಕೀರ್ಣ ಕಟ್ಟಡ.
10. ಸಹಾಯಕ ನಿರ್ದೇಶಕರು, ಪಶು ಸಂಗೋಪನಾ ಇಲಾಖೆ, ದಾಸಪ್ಪ ಆಸ್ಪತ್ರೆ, ಬಿಬಿಎಂಪಿ. ಬೆಂಗಳೂರು.
11. ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು, ಬಿ.ಎಂ.ಟಿ.ಸಿ ಕೇಂದ್ರ ಕಛೇರಿ, ಕೆಂಗಲ್ ಹನುಮಂತಯ್ಯ ರಸ್ತೆ, ಶಾಂತಿನಗರ, ಬೆಂಗಳೂರು

1. ವಾರ್ಡಿನ ಸ್ಥಳೀಯರು ಮಾತನಾಡಿ 9ನೇ ಅಡ್ಡರಸ್ತೆ ಅಗಡಿ ಆಸ್ಪತ್ರೆ ಹತ್ತಿರ ಹೆ.ಡಿ.ಡಿ ಕೇಬಲ್ ಅಳವಡಿಸಲು ಅಗೆದಿರುವ ರಸ್ತೆಯನ್ನು ಮುಚ್ಚುವಂತೆ ಸಭೆಯಲ್ಲಿ ತಿಳಿಸಿದರು.
2. ವಾರ್ಡಿನ ಸ್ಥಳೀಯರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಖಾಲಿ ಇರುವ ಸೈಟ್‌ನಲ್ಲಿ ಕಸ ಹಾಗೂ ಅನುಪಯುಕ್ತ ವಸ್ತುಗಳನ್ನು ತಂದು ಸುರಿಯುತ್ತಿದ್ದು, ಈ ಬಗ್ಗೆ ಕ್ರಮ ವಹಿಸಲು ಸಭೆಯಲ್ಲಿ ತಿಳಿಸಿದರು.
3. ವಾರ್ಡಿನ ಸ್ಥಳೀಯರು ಮಾತನಾಡಿ 6ನೇ ಹಾಗೂ 7ನೇ ಅಡ್ಡರಸ್ತೆ ಮತ್ತು ಮೇರಿ ಇಮ್ಯಾಕ್ಯುಲೇಟೀವ್ ಶಾಲೆ ಹತ್ತಿರ ಚರಂಡಿ ಕಾಮಗಾರಿ ನಡೆಯುತ್ತಿದ್ದು, ಶಾಲೆಯ ಮುಂಭಾಗದಲ್ಲಿ ಚರಂಡಿ ಮೇಲಿನ ಚಪ್ಪಡಿ ಕಲ್ಲನ್ನು ಅತಿ ಶೀಘ್ರವಾಗಿ ಮುಚ್ಚಿ ಶಾಲಾ ಮಕ್ಕಳ ಓಡಾಡಲು ಅನುವು ಮಾಡಿಕೊಡಬೇಕೆಂದು ಸಭೆಯಲ್ಲಿ ತಿಳಿಸಿದರು.
4. ವಾರ್ಡಿನ ಸ್ಥಳೀಯರು ಮಾತನಾಡಿ ವಿಲ್ಸನ್‌ಗಾರ್ಡನ್ ಪೊಲೀಸ್ ಠಾಣೆ ಹತ್ತಿರ 6ನೇ ಅಡ್ಡರಸ್ತೆಯಲ್ಲಿ ಚರಂಡಿ ಕಾಮಗಾರಿ ಪ್ರಗತಿಯಲ್ಲಿದ್ದು, ಚರಂಡಿಯಿಂದ ಹೊರ ತೆಗೆದಿರುವ ಹೂಳು ರಸ್ತೆಯ ಬದಿಯಲ್ಲಿ ಬಿದ್ದಿದ್ದು, ತೆರವುಗೊಳಿಸುವಂತೆ ಸಭೆಯಲ್ಲಿ ತಿಳಿಸಿದರು.
5. ವಾರ್ಡಿನ ಸ್ಥಳೀಯರು ಮಾತನಾಡಿ ವಿಲ್ಸನ್‌ಗಾರ್ಡನ್ 9ನೇ ಅಡ್ಡರಸ್ತೆಯಲ್ಲಿ ಪಾದಚಾರಿ ರಸ್ತೆಗೆ ಅಳವಡಿಸಿರುವ ಸೈಜುಗಲ್ಲು ಮುರಿದು ಬಿದ್ದಿದ್ದು ಇದರಿಂದ ಸಾರ್ವಜನಿಕರು ಓಡಾಡಲು ತೊಂದರೆಯಾಗುತ್ತಿದ್ದು, ಸರಿಪಡಿಸಿಕೊಡಲು ಸಭೆಯಲ್ಲಿ ತಿಳಿಸಿದರು.
6. ವಿಲ್ಸನ್‌ಗಾರ್ಡನ್ ಸಂಚಾರ ಪೊಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಆದ ಶ್ರೀಮತಿ. ಶೋಭ ಜಿ ರವರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಪಾಲಿಕೆ ವತಿಯಿಂದ ಕೈಗೊಳ್ಳುವ ಕಾಮಗಾರಿಗಳು ಸಂಪೂರ್ಣ ಮಾಹಿತಿಯನ್ನು ನೀಡುವಂತೆ ಸಭೆಯಲ್ಲಿ ತಿಳಿಸಿದರು.



Scanned with CamScanner

Scanned with CamScanner

7. ವಿಲ್ಸನ್‌ಗಾರ್ಡನ್ ಸಂಚಾರ ಪೊಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಆದ ಶ್ರೀಮತಿ. ಶೋಭ ಜಿ ರವರು ಮಾತನಾಡಿ ಪೊಲೀಸ್ ಠಾಣೆಯ ಸುತ್ತಲೂ ಸ್ವಚ್ಛತೆ ಕಾಪಾಡಬೇಕೆಂದು ಘನತ್ಯಾಜ್ಯ ನಿರ್ವಹಣೆ ಇಲಾಖೆಯವರಿಗೆ ಸಭೆಯಲ್ಲಿ ತಿಳಿಸಿದರು.

8. ವಿಲ್ಸನ್‌ಗಾರ್ಡನ್ ಸಂಚಾರ ಪೊಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಆದ ಶ್ರೀಮತಿ. ಶೋಭ ಜಿ ರವರು ಮಾತನಾಡಿ ಪೊಲೀಸ್ ಠಾಣೆಯ ಆವರಣದಲ್ಲಿರುವ ಹುಣಸೆ ಮರವು ಹುಳ ಬಿದ್ದು ಹಾಳಾಗಿತ್ತಿದ್ದು, ಅರಣ್ಯ ಇಲಾಖೆ ವತಿಯಿಂದ ಅದಕ್ಕೆ ಔಷದಿ ಸಿಂಪಡಿಸಿ ಸರಿಪಡಿಸಿಕೊಡಬೇಕೆಂದು ಸಭೆಯಲ್ಲಿ ತಿಳಿಸಿರುತ್ತಾರೆ. ಹಾಗೂ ಈಗಾಗಲೇ ಕತ್ತರಿಸಿ ಬಿದ್ದಿರುವ ರೆಂಬೆ ಕೊಂಬೆಗಳನ್ನು ಪೂರ್ಣವಾಗಿ ತೆರವುಗೊಳಿಸಿರುವುದಿಲ್ಲ ಎಂದು ಸಭೆಯಲ್ಲಿ ತಿಳಿಸಿದರು.

9. ವಿಲ್ಸನ್‌ಗಾರ್ಡನ್ ಸಂಚಾರ ಪೊಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಆದ ಶ್ರೀಮತಿ. ಶೋಭ ಜಿ ರವರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಹಾಕಲಾಗಿರುವ ರಸ್ತೆ ಉಬ್ಬುಗಳಿಗೆ ಬಿಳಿ ಬಣ್ಣದ ಮಾರ್ಕಿಂಗ್ ಮಾಡುವಂತೆ ಸಭೆಯಲ್ಲಿ ತಿಳಿಸಿದರು.

10. ವಾರ್ಡಿನ ಸ್ಥಳೀಯರು ಮಾತನಾಡಿ ರಾಣಿ ಪಾರ್ಕ್ ಸುತ್ತಲೂ ಅಂದರೆ 3ನೇ ಹಾಗೂ ನಾಲ್ಕನೇ ಅಡ್ಡರಸ್ತೆಯಲ್ಲಿ ನಿಲ್ಲಿಸಲಾಗಿರುವ ವಾಹನಗಳನ್ನು ತೆರವುಗೊಳಿಸಲು ಸಭೆಯಲ್ಲಿ ತಿಳಿಸಿರುತ್ತಾರೆ.

11. ವಾರ್ಡಿನ ಸ್ಥಳೀಯರು ಮಾತನಾಡಿ 4ನೇ ಅಡ್ಡರಸ್ತೆ ಹಾಗೂ 11ನೇ ಮುಖ್ಯರಸ್ತೆ ಮಿಲ್ಕೀಮಿಸ್ಟ್ ಹತ್ತಿರ ಹೂವಿನ ಅಂಗಡಿ ತೆರೆಯಲಾಗಿದ್ದು, ಸದರಿ ಹೂವಿನ ಅಂಗಡಿಗಳನ್ನು ಮುಚ್ಚಲು ಕ್ರಮ ವಹಿಸುವಂತೆ ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ಸಭೆಯಲ್ಲಿ ತಿಳಿಸಿದರು.

12. ವಾರ್ಡಿನ ಸ್ಥಳೀಯರು ಮಾತನಾಡಿ 12ನೇ ಅಡ್ಡರಸ್ತೆ ಹಾಗೂ 13ನೇ ಅಡ್ಡರಸ್ತೆಯ ನಡುವೆ ಎರಡೂ ಬದಿಯಲ್ಲಿ ವಾಹನಗಳನ್ನು ನಿಲ್ಲಿಸಲಾಗಿದ್ದು, ತೆರವುಗೊಳಿಸುವಂತೆ ಸಭೆಯಲ್ಲಿ ತಿಳಿಸಿದರು.

13. ವಾರ್ಡಿನ ಸ್ಥಳೀಯರು ಮಾತನಾಡಿ ವಾರ್ಡ್ ವ್ಯಾಪ್ತಿಯ ಸುತ್ತಲೂ ಬ್ಯಾರಿಕೇಟ್‌ಗಳು ಹಾಗೂ ಸೈನ್ ಬೋರ್ಡ್‌ಗಳನ್ನು ಅಳವಡಿಸಲು ಟ್ರಾಫಿಕ್ ಇಂಜನಿಯರಿಂಗ್ ಸೆಲ್ ವಿಭಾಗ ರವರಿಗೆ ಪತ್ರ ಬರೆಯಲು ಸಭೆಯಲ್ಲಿ ತಿಳಿಸಿದರು.



Scanned with CamScanner

Scanned with CamScanner

14. ವಾರ್ಡಿನ ಸ್ಥಳೀಯರು ಮಾತನಾಡಿ ವಿಲ್ಸನ್‌ಗಾರ್ಡನ್ 11ನೇ ಅಡ್ಡರಸ್ತೆಯಲ್ಲಿ ಶಾಂತಿ ಚರ್ಚ್ ಮುಂದೆ ಹೆಚ್ಚು ವಾಹನ ನಿಲುಗಡೆ ಮಾಡುತ್ತಿದ್ದು, ಇದರಿಂದ ಸಾರ್ವಜನಿಕರ ಓಡಾಟಕ್ಕೆ ತೊಂದರೆಯಾಗಿದ್ದು, ವಾಹನ ನಿಲುಗಡೆ ಮಾಡದಂತೆ ಕ್ರಮ ವಹಿಸಲು ಸಭೆಯಲ್ಲಿ ತಿಳಿಸಿದರು.

15. ವಾರ್ಡಿನ ಸ್ಥಳೀಯರು ಮಾತನಾಡಿ 7ನೇ ಅಡ್ಡರಸ್ತೆಯ ತಿರುವಿನಲ್ಲಿ ಚರಂಡಿ ಕಾಮಗಾರಿ ಪ್ರಗತಿಯಲ್ಲಿದ್ದು, ಅತಿ ಶೀಘ್ರವಾಗಿ ಕಲ್ಲು ಚಪ್ಪಡಿಗಳನ್ನು ಅಳವಡಿಸಿಕೊಡುವಂತೆ ಸಭೆಯಲ್ಲಿ ತಿಳಿಸಿದರು.

16. ವಾರ್ಡಿನ ಸ್ಥಳೀಯರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿರುವ ಹಿಂದು ರುದ್ರಭೂಮಿ, ವಿದ್ಯುತ್ ಚಿತಾಗಾರ ಹಾಗೂ ಹೊಂಬೇಗೌಡ ಆಟದ ಮೈದಾನವನ್ನು ಅಭಿವೃದ್ಧಿ ಪಡಿಸಬೇಕೆಂದು ಸಭೆಯಲ್ಲಿ ತಿಳಿಸಿದರು.

17. ವಾರ್ಡಿನ ಸ್ಥಳೀಯರು ಮಾತನಾಡಿ ವಿಲ್ಸನ್‌ಗಾರ್ಡನ್ 10ನೇ ಅಡ್ಡರಸ್ತೆಯ ಹೊಂಬೇಗೌಡ ಆಟದ ಮೈದಾನದಲ್ಲಿರುವ ಸ್ಕೇಟಿಂಗ್ ರಿಂಗ್‌ನ್ನು ಬಳಸಲು ಸಾರ್ವಜನಿಕರೆಲ್ಲರಿಗೂ ಅವಕಾಶ ಕಲ್ಪಿಸಿಕೊಡಬೇಕೆಂದು ಹಾಗೂ ಕೇವಲ ಅಸೋಸಿಯೇಷನ್ ಮೆಂಬರ್‌ಗಳಿಗೆ ಮಾತ್ರ ಸ್ಕೇಟಿಂಗ್ ರಿಂಗ್‌ನ್ನು ಬಳಸಲು ಅವಕಾಶ ಮಾಡಿಕೊಡಲಾಗುತ್ತಿದೆ ಎಂದು ಸಭೆಯಲ್ಲಿ ತಿಳಿಸಿದರು.

ಮೇಲಿನ ಈ ಎಲ್ಲಾ ಚಟುವಟಿಕೆಗಳನ್ನು ಕ್ರಮಬದ್ಧವಾಗಿ ಸಂಬಂಧಪಟ್ಟ ಇಲಾಖಾವಾರು ಸಮನ್ವಯ ಸಾಧಿಸಿಕೊಂಡು ನಿರ್ವಹಿಸಲು ಎಲ್ಲಾ ಸಿಬ್ಬಂಧಿ ವರ್ಗದವರು ಒಂದುಗೂಡಿ ಈ ಕಾರ್ಯದಲ್ಲಿ ಪಾಲ್ಗೊಂಡು ಮಾನ್ಯ ಆಯುಕ್ತರು (ಬಿಬಿಎಂಪಿ) ರವರು ವಹಿಸಿರುವ ಜವಾಬ್ಧಾರಿಯನ್ನು ಯಶಸ್ವಿಯಾಗಿ ನಿರ್ವಹಿಸಲು ಎಲ್ಲರೂ ಸಹಕರಿಸಬೇಕೆಂದು ಹೇಳುತ್ತಾ ಸಭೆ ಮುಕ್ತಾಯಗೊಳಿಸಿದರು.

N. Ruchitha. AE 145.
ಕಾರ್ಯದರ್ಶಿ & ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ – 177(145)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅಧ್ಯಕ್ಷರು & ನೋಡಲ್ ಅಧಿಕಾರಿ
ವಾರ್ಡ್ ಸಂಖ್ಯೆ – 177(145) 17/12/22
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ



Scanned with CamScanner

Scanned with CamScanner